ಮತ್ತು ಪಶು ಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿರುವ ಒಟ್ಟು ಗ್ರಂಥಾಲಯಗಳ ಸಂಖ್ಯೆ ಎಷ್ಟು; ಈ ಪೈಕಿ ಎಷ್ಟು ಗ್ರಂಥಾಲಯಗಳಿಗೆ ಸ್ವಂತ ಕಟ್ಟಡಗಳಿವೆ ಹಾಗೂ ಎಷ್ಟು ಗ್ರಂಥಾಲಯಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ;

ಆ) 2010-11ನೇ ಸಾಲಿನಲ್ಲಿ ಜಿಲ್ಲೆಯ ಯಾವ ಯಾವ ಗ್ರಂಥಾಲಯಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇ) ಜಿಲ್ಲೆಯಲ್ಲಿರುವ ಪ್ರತಿ ಗ್ರಂಥಾಲಯ ನಿರ್ವಹಣೆಗಾಗಿ 2008-09 ಹಾಗೂ 2009-10ನೇ ಸಾಲಿನಲ್ಲಿ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು? (ಪೂರ್ಣ ವಿವರಗಳನ್ನು ಗ್ರಂಥಾಲಯವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಶ್ರೀ ರೇವೂ ನಾಯಕ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು):

ಅ) ಬೀದರ್ ಜಿಲ್ಲೆಯ ಒಟ್ಟು ಗ್ರಂಥಾಲಯಗಳ ಸಂಖ್ಯೆ 206 ಇರುತ್ತವೆ ಅದರಲ್ಲಿ ಸ್ವಂತ ಕಟ್ಟಡಗಳು:17. ಬಾಡಿಗೆ ಕಟ್ಟಡಗಳು 02.

ಆ) ಇಲ್ಲ.

ಇ) ಒಟ್ಟು 206 ಗ್ರಂಥಾಲಯಗಳಿಗೆ ಮಾಡಿರುವ ವೆಚ್ಚದ ವಿವರ

2008-09 ನೇ ಸಾಲಿನಲ್ಲಿ ರೂ. 116.30 ಲಕ್ಷ.

2009-10 ನೇ ಸಾಲಿನಲ್ಲಿ ರೂ. 158.20 ಲಕ್ಷ.

ಮೇಲ್ಕಂಡ ವೆಚ್ಚದಲ್ಲಿ ಸಿಬ್ಬಂದಿಗಳ ವೇತನ ನಿಯತಕಾಲಿಕೆ, ದಿನಪತ್ರಿಕೆಗಳು, ಪುಸ್ತಕ ಖರೀದಿ, ಪುಸ್ತಕ ರಟ್ಟು ಕಟ್ಟುವಿಕೆ, ಕಟ್ಟಡ ಬಾಡಿಗೆ ದುರಸ್ತಿ ಮೇಲ್ವಿಚಾರಕರ ಗೌರವಧನ, ಮುಂತಾದವುಗಳು ಒಳಗೊಂಡಿರುತ್ತವೆ.

ಮರಾಠಿ ಶಾಲೆಗಳ ಬಗ್ಗೆ

86(308): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಾಲ್ಕಿ ಮತಕ್ಷೇತ್ರದಲ್ಲಿ ಈಗ ಇರುವ ಮರಾಠಿ ಮಾಧ್ಯಮದ ಶಾಲೆಗಳ ಸಂಖ್ಯೆ ಎಷ್ಟು?

ಆ) ಈ ಕ್ಷೇತ್ರವು ನೆರೆಯ ರಾಜ್ಯವಾದ ಮಹಾರಾಷ್ಟ್ರದ ಗಡಿಯಲ್ಲಿ ಬರುತ್ತಿದ್ದು ಈ ಕ್ಷೇತ್ರದಲ್ಲಿರುವ ಮರಾಠಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಮರಾಠಿ ಶಾಲೆಗಳ ಅವಶ್ಯಕತೆ ಇದೆ?

ಇ) ಈ ಕ್ಷೇತ್ರದಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಮರಾಠಿ ಶಾಲೆಗಳನ್ನು ತೆರೆಯುವ ಉದ್ದೇಶವನ್ನು ಸರ್ಕಾರ ಹೊಂದಿದೆ ಹಾಗೂ ಈ ಬಗ್ಗೆ ಸರ್ಕಾರದ ಮುಂದೆ ಇರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು);

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಭಾಲ್ಕಿ ಮತಕ್ಷೇತ್ರದಲ್ಲಿ ಈಗ ಇರುವ ಮರಾಠಿ ಮಾಧ್ಯಮದ ಶಾಲೆಗಳ ಸಂಖ್ಯೆ–90

ಆ) ಸಾಯಗಾಂವ್ ಸಿ.ಆರ್.ಸಿ. ವ್ಯಾಪ್ತಿಯಲ್ಲಿ ಮಾತ್ರ 02 ಪ್ರಾಥಮಿಕ ಶಾಲೆಗಳ ಅವಶ್ಯಕತೆ ಇದೆ, ಅವುಗಳೆಂದರೆ

ವಾಂಜರಖೇಡ ಬಡಾವಣೆ, ಕೋಂಗಳಿ ಬಡಾವಣೆ.

ಇ) ಸಾಯಗಾಂವ್ ಸಿ.ಆರ್.ಸಿ. ವ್ಯಾಪ್ತಿಯಲ್ಲಿ ವಾಂಜರ ಖೇಡ ಬಡಾವಣೆ ಮತ್ತು ಕೋಂಗಳಿ ಬಡಾವಣೆಗಳಲ್ಲಿ ಮಾತ್ರ 02 ಮರಾಠಿ ಪ್ರಾಥಮಿಕ ಶಾಲೆಗಳ ಅವಶ್ಯಕತೆ ಇದೆ. 2011–12ನೇ ಕ್ರಿಯಾ ಯೋಜನೆಯಲ್ಲಿ ಹೆಚ್ಚುವರಿಯಾಗಿ 02 ಮರಾಠಿ ಶಾಲೆಗಳನ್ನು ತೆರೆಯಲು ಉದ್ದೇಶಿಸಿದೆ.

ಶಿಕ್ಷಕರ ನೇಮಕದ ಬಗ್ಗೆ

87(309): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯ ವಿವಿಧ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳಿಗೆ ಮಂಜೂರಾಗಿರುವ ದೈಹಿಕ ಮತ್ತು ಕಲಾ ಶಿಕ್ಷಕರ ಸಂಖ್ಯೆ ಎಷ್ಟು (ಶಾಲಾವಾರು ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);